ಕ್ರಮ ಸಂಖ್ಯೆ : 2

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನಾಲ್ಕನೇ ಅಧಿವೇಶನ**

## ಕರ್ನಾಟಕ ಮಾರಾಟಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ–20)**

ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 25) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ಮಾರಾಟಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಎರಡನೇ ಅನುಸೂಚಿಯ ತಿದ್ದುಪಡಿ.**– ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 25) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ),–

(i) ಭಾಗ "ಎಂ" ದಲ್ಲಿ, ಕ್ರಮ ಸಂಖ್ಯೆ 12ರಲ್ಲಿ, (i)ನೇ ಬಾಬಿಗೆ ಸಂಬಂಧಿಸಿದ ನಮೂದುಗಳಲ್ಲಿ (3)ನೇ ಅಂಕಣದಲ್ಲಿ "ಶೇಕಡಾ ಮೂವತ್ತು" ಎಂಬ ಪದಗಳಿಗೆ "ಶೇಕಡಾ ಮೂವತ್ತೈದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಭಾಗ "ಪಿ" ದಲ್ಲಿ, ಕ್ರಮ ಸಂಖ್ಯೆ 5ರಲ್ಲಿ, (iv)ನೇ ಬಾಬಿಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

| | | |
|---|---|---|
| "(v) | ಕೊಳವೆಯುಕ್ತ ನೈಸರ್ಗಿಕ ಅನಿಲ (ಪಿಎನ್ ಜಿ) ಮತ್ತು ಕಂಪ್ರೆಸ್ಡ್ ನೈಸರ್ಗಿಕ ಅನಿಲ (ಸಿಎನ್‌ಜಿ) ಒಳಗೊಂಡ ನೈಸರ್ಗಿಕ ಅನಿಲ | ಶೇಕಡಾ ಹದಿನಾಲ್ಕೂವರೆ" |

**3. ನಾಲ್ಕನೇ ಅನುಸೂಚಿಯ ತಿದ್ದುಪಡಿ.**– ಮೂಲ ಅಧಿನಿಯಮದ ನಾಲ್ಕನೇ ಅನುಸೂಚಿಯಲ್ಲಿ, ಕ್ರಮ ಸಂಖ್ಯೆ 8 ರ (4)ನೇ ಅಂಕಣದಲ್ಲಿ "ಶೇಕಡಾ ನಾಲ್ಕು" ಎಂಬ ಪದಗಳಿಗೆ "ಶೇಕಡಾ ಐದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪೆಟ್ರೋಲ್, ಹೈಸ್ಪೀಡ್ ಡೀಸಲ್, ವೈಮಾನಿಕ ಟರ್ಬೈನ್ ಇಂಧನ, ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲದ ಮೇಲೆ ತೆರಿಗೆಯನ್ನು ಜಿಎಸ್‌ಟಿ ಪರಿಷತ್ತು ನಿರ್ಧರಿಸಬಹುದಾದ ದಿನಾಂಕದಿಂದ ವಿಧಿಸತಕ್ಕದ್ದು. ಅಲ್ಲಿಯವರೆಗೆ ಮತ್ತು ಆ ತರುವಾಯವು, ಈ ಉತ್ಪನ್ನಗಳ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ರಾಜ್ಯಗಳಿಗೆ, ಅಧಿಕಾರವಿರುತ್ತದೆ. ಆದುದರಿಂದ, ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ಕ್ಕೆ (1957ರ ಕರ್ನಾಟಕ ಅಧಿನಿಯಮ 25) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 25) ಉದ್ಧೃತ ಭಾಗ

xx xx xx

### ಎರಡನೇ ಅನುಸೂಚಿ

5(3)(ಎ) ಪ್ರಕರಣದ ಅಡಿಯಲ್ಲಿ ರಾಜ್ಯದಲ್ಲಿ ಮೊದಲ ಅಥವಾ ಮುಂಚಿನ ಕ್ರಮಾಗತ ವ್ಯಾಪಾರಗಾರರ ಮೇಲೆ ವಿಧಿಸಬಹುದಾದ ಒಂದು ಅಂಶದ ತೆರಿಗೆಯ ಮಾರಾಟದ ಮೇಲಿನ ಸರಕುಗಳು.

| ಕ್ರಮ ಸಂಖ್ಯೆ | ಸರಕುಗಳ ವಿವರಣೆ | ತೆರಿಗೆ ದರ |
|---|---|---|
| 1 | 2 | 3 |
| xx | xx | xx |
| | **ಭಾಗ ಎಂ** | |
| 1. | ಯಂತ್ರೋಪಕರಣ, ಎಂದರೆ,- | |
| xx | xx | xx |
| **12.** | **ಮೋಟಾರ್ ಸ್ಪಿರಿಟ್‌ಗಳು ಎಂದರೆ,-** | |
| (i) | ವೈಮಾನಿಕ ಇಂಧನ ಒಳಗೊಂಡಂತೆ ಪೆಟ್ರೋಲ್ | ಶೇಕಡಾ ಮೂವತ್ತು |
| xx | xx | xx |
| | **ಭಾಗ ಪಿ** | |
| **5.** | **ಪೆಟ್ರೋಲಿಯಂ ಉತ್ಪನ್ನಗಳು ಎಂದರೆ,-** | |
| (i) | ಅಸ್ಫಾಲ್ಟ್ (ಬಿಟಮಿನ್) | ಶೇಕಡಾ ಹದಿನಾರು |
| xx | xx | xx |
| (iv) | ನಾಫ್ತ | ಶೇಕಡಾ ಹನ್ನೆರಡು |
| xx | xx | xx |

### ನಾಲ್ಕನೇ ಅನುಸೂಚಿ

5(4)ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆ ಸಂಬಂಧದಲ್ಲಿನ ಘೋಷಿತ ಸರಕುಗಳು

| ಕ್ರಮ ಸಂಖ್ಯೆ | ಸರಕುಗಳ ವಿವರ | ವಿಧಿಸುವ ಬಿಂದು | ತೆರಿಗೆ ದರ |
|---|---|---|---|
| (1) | (2) | (3) | (4) |
| xx | | xx | xx |
| 8. ಕೇಂದ್ರ ಮಾರಟಗಳ ತೆರಿಗೆ ಅಧಿನಿಯಮ 1956ರ 14ನೇ ಪ್ರಕರಣದ (iiಸಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಕಚ್ಚಾ ತೈಲ | | ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಹೊಣೆಗಾರನಾದ ರಾಜ್ಯದಲ್ಲಿನ ಮೊದಲ ಅಥವಾ ಮುಂಚಿನ ಕ್ರಮಾಗತ ಮಾರಾಟಗಾರರ ಮೂಲಕ ಮಾರಾಟ | ಶೇಕಡಾ ನಾಲ್ಕು |
| xx | | xx | xx |

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ 192, -ಪ್ರತಿಗಳು 1000, 6ನೇ ನೂನ್ 2017

Serial No.: (2)

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

# THE KARNATAKA SALES TAX (AMENDMENT) BILL, 2017
## (L.A. Bill No. 20 of 2017)

A Bill further to amend the Karnataka Sales Tax Act.

Whereas it is expedient further to amend the Karnataka Sales Tax Act, 1957 (Karnataka Act 25 of 1957) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows.-

**1. Short title and commencement.-** (1) This Act may be called the Karnataka Sales Tax (Amendment) Act, 2017.

(2) It shall come into force on such date as the State Government may be notification, appoint.

**2. Amendment to second schedule.-** In the second schedule of the Karnataka Sales Tax Act, 1957 (Karnataka Act 25 of 1957) (hereinafter referred to as the principal Act),-

(i) in Part "M", in serial number 12, in the entries relating to item (i), in column (3), for the words "thirty percent", the words "thirty-five percent" shall be substituted;

(ii) in Part "P", in serial number 5, after the entries relating to item (iv), the following shall be inserted, namely:-

| | | |
|---|---|---|
| "(v) | Natural Gas including Piped Natural Gas (PNG) and Compressed Natural Gas (CNG) | Fourteen and one half percent" |

**3. Amendment of fourth schedule.-** In the fourth schedule of the principal Act, in serial number 8, in column (4), for the words "four percent", the words "five percent" shall be substituted.

## STATEMENT OF OBJECTS AND REASONS

Tax on petrol, high speed diesel, aviation turbine fuel, crude oil and natural gas shall be levied from a date that the GST Council may decide. Till then and even after that, States will be empowered to levy tax on sale of these products. Hence, it is considered to amend the Karnataka Sales Tax Act, 1957 (Karnataka Act 25 of 1957).

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**SIDDARAMAIAH**
CHIEF MINISTER

**S. Murthy**
Secretary (I/c)
Karnataka Legislative Assembly

## ANNEXURE
## EXTRACT FROM THE KARNATAKA SALES TAX ACT, 1957
## (KARNATAKA ACT 25 OF 1957)

**XXX XXX XXX**

**SECOND SCHEDULE**

Goods on the sale of which a single point tax is leviable on the first or earliest of successive dealers in the State under section 5(3)(a)

| Sl.No. | Description of goods | Rate of Tax |
|---|---|---|
| 1 | 2 | 3 |

**XXX XXX XXX**

**PART M**

1. Machinery, that is to say,—

**XXX XXX XXX**

**12. Motor spirits, that is to say,—**

(i) Petrol including aviation fuel — Thirty percent.

**XXX XXX XXX**

**PART P**

**5.Petroleum products, namely,—**

(i) Asphalt (bitumen) — Sixteen percent

**XXX XXX XXX**

(iv) Naptha — Twelve percent

**XXX XXX XXX**

**FOURTH SCHEDULE**

Declared goods in respect of which tax is leviable under section 5(4).

| Sl. No. | Description of the goods | Point of levy | Rate of tax |
|---|---|---|---|
| (1) | (2) | (3) | (4) |
| | **XXX** | **XXX** | **XXX** |
| | 8. Crude oil as specified in clause (iic) of section 14 of the Central Sales Tax Act, 1956. | Sale by the first or earliest of successive dealers in the State liable to tax under this Act. | Four percent |

**XXX XXX XXX**

Government Press, Vikasa Soudha Unit, Bengaluru 6th June, 2017 P7, W.D.192, Copies 1000